# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 942 |
| ಸದಸ್ಯರ ಹೆಸರು | : ಶ್ರೀ ಎಸ್.ಎಲ್. ಭೋಜೇಗೌಡ |
| ಉತ್ತರಿಸುವ ದಿನಾಂಕ | : 22-02-2024. |
| ಉತ್ತರಿಸುವ ಸಚಿವರು | : ಸಮಾಜ ಕಲ್ಯಾಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೀಸಲಾತಿ ಎಂದರೇನು; ಇದರ ಇತಿಹಾಸವೇನು; ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಮೀಸಲಾತಿಯನ್ನು ಪ್ರಾರಂಭದಿಂದ ಇಲ್ಲಿಯವರೆಗೂ ಯಾವ ರೀತಿ ಜಾರಿಗೊಳಿಸಲಾಗಿದೆ; ಕಾಲಾನುಕ್ರಮದ ಅನುಸಾರ ಮಾಹಿತಿ ನೀಡುವುದು;</td><td>ಸಮಾಜ ಕಲ್ಯಾಣ ಇಲಾಖೆ:-<br>ಭಾರತ ಸಂವಿಧಾನ ಜಾರಿಗೆ ಬಂದಾಗಿನಿಂದ ಸಂವಿಧಾನದ ಅನುಚ್ಛೇದ 15(4) ಮತ್ತು 16(4) ರಡಿಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಈ ಹಿಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವುದೇ ಮೀಸಲಾತಿ ಇಲ್ಲದ ಕಾರಣ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಾತಿನಿಧ್ಯ ನೀಡುವ ಹಿನ್ನೆಲೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.<br>1950ನೇ ಸಾಲಿನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಒಟ್ಟಾರೆ 18% ತದನಂತರ ಪರಿಶಿಷ್ಟ ಜಾತಿಗೆ 15% ಹಾಗೂ ಪರಿಶಿಷ್ಟ ಪಂಗಡದವರಿಗೆ 3% ಎಂದು ಮೀಸಲಾತಿ ಕಲ್ಪಿಸಲಾಗಿದೆ. 2022ನೇ ಸಾಲಿನಿಂದ ಸದರಿ ಮೀಸಲಾತಿಯನ್ನು ಪರಿಶಿಷ್ಟಜಾತಿಗೆ 17% ಮತ್ತು ಪರಿಶಿಷ್ಟ ಪಂಗಡದವರಿಗೆ 7%ಕ್ಕೆ ಹೆಚ್ಚಿಸಲಾಗಿದೆ.<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-<br>ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಮೀಸಲಾತಿಯ ವಿವರಗಳನ್ನು ಅನುಬಂಧ-1 ರಲ್ಲಿ</td></tr>
<tr><td>ಆ)</td><td>ರಾಜ್ಯ ಸರ್ಕಾರಗಳ ಸಿಬ್ಬಂದಿ ನೇಮಕಾತಿಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಲಂಬ ಹಾಗೂ ಸಮತಳ ಮೀಸಲಾತಿಗಳಾವುವು; (ವಿವರವಾಗಿ ವರ್ಗವಾರು ಮಾಹಿತಿ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸೆಹಿಮ 2022 ಬೆಂಗಳೂರು ದಿನಾಂಕ: 28.12.2022ರನ್ವಯ ಲಂಬ (The vertical reservation) ನ್ನು ಕೆಳಗಿನಂತೆ ನಿಗಧಿಪಡಿಸಲಾಗಿದೆ.
<table>
<tr><th></th><th></th><th>ಶೇಕಡವಾರು ಮೀಸಲಾತಿ</th></tr>
<tr><td>I</td><td>ಪ್ರವರ್ಗ- I</td><td>4</td></tr>
<tr><td>II(ಎ)</td><td>ಪ್ರವರ್ಗ-II(ಎ)</td><td>15</td></tr>
<tr><td>II(ಬಿ)</td><td>ಪ್ರವರ್ಗ-II(ಬಿ)</td><td>4</td></tr>
<tr><td>III(ಎ)</td><td>ಪ್ರವರ್ಗ-III(ಎ)</td><td>4</td></tr>
<tr><td>III(ಬಿ)</td><td>ಪ್ರವರ್ಗ-III(ಬಿ)</td><td>5</td></tr>
<tr><td>ಪ.ಜಾತಿ</td><td>ಪರಿಶಿಷ್ಟ ಜಾತಿ</td><td>17</td></tr>
<tr><td>ಪ.ಪಂಗಡ</td><td>ಪರಿಶಿಷ್ಟ ಪಂಗಡ</td><td>7</td></tr>
<tr><td>ಸಾ.ಅ</td><td>ಸಾಮಾನ್ಯ ಅರ್ಹತೆ</td><td>44</td></tr>
<tr><td></td><td>ಒಟ್ಟು</td><td>100</td></tr>
</table></td></tr>
</table>

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 02 ಸೆಹಿಮ 2023 ದಿನಾಂಕ: 08.03.2023 ರಲ್ಲಿ ಕೆಳಕಂಡಂತೆ ಸಮತಲ (Horizontal Reservation) ಮೀಸಲಾತಿಯನ್ನು ಕಲ್ಪಿಸಲಾಗಿದೆ.<br>1. ಮಾಜಿ ಸೈನಿಕರು – 10%<br>2. ಅಂಗವಿಕಲ ಅಭ್ಯರ್ಥಿ - 4% - (ವೃಂದ ಎ & ಬಿ- 4% ಮತ್ತು ಬಿ & ಸಿ – 5%)<br>3. ಯೋಜನೆಗಳಿಂದ ನಿರಾಶ್ರಿತಗೊಂಡವರು – 5%<br>4. ಮಹಿಳಾ ಅಭ್ಯರ್ಥಿ - 33%<br>5. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ – 5%<br>6. ತೃತೀಯ ಲಿಂಗಿಗಳು – 1%<br>7. ಗ್ರಾಮೀಣ ಅಭ್ಯರ್ಥಿ - 25%<br><br>ಆದೇಶಗಳ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಿದೆ. |
| ಇ) | ಸದರಿ ಮೀಸಲಾತಿಯಲ್ಲಿ ಬರುವ ರೋಸ್ಟರ್ ಬಿಂದುಗಳು ಎಂದರೇನು; ಇವುಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸೆಹಿಮ 2022, ದಿನಾಂಕ: 28.12.2022ರನ್ವಯ ಮೀಸಲಾತಿ ಪ್ರತಿ ಶತದಂತೆ ನೇಮಕಾತಿಗಾಗಿ ಒಂದು ವರ್ತುಲದಲ್ಲಿ 100 ಬಿಂದುಗಳನ್ನು ನಿಗದಿಪಡಿಸಿದ್ದು, ಅದರ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಬಿಂದುಗಳನ್ನು ಗುರುತಿಸಲಾಗಿದೆ. 100 ಬಿಂದುಗಳು ಪೂರ್ಣಗೊಂಡ ನಂತರ ಅದೇ ರೀತಿಯಲ್ಲಿ ಎರಡನೇ ವರ್ತುಲ ಪ್ರಾರಂಭವಾಗುತ್ತದೆ.<br><br>ಮೀಸಲಾತಿ ಪ್ರತಿಶತಗಳಂತೆ ರೋಸ್ಟರ್ ಬಿಂದುಗಳನ್ನು ಗುರುತಿಸಲಾಗಿದೆ. |
| ಈ) | ಈ ಮೀಸಲಾತಿ ಹಾಗೂ ರೋಸ್ಟರ್ ಬಿಂದುಗಳನ್ನು ಯಾವ ತಳಹದಿ ಅಥವಾ ಆಧಾರ ಅಥವಾ ಯಾವ ಆಯೋಗದ ವರದಿಯ ಮೇಲೆ ನಿರ್ಣಯಿಸಲಾಗಿದೆ; (ವಿವರವಾಗಿ ಪ್ರಾರಂಭದಿಂದ ಇಲ್ಲಿಯವರೆಗೂ ಮಾಹಿತಿ ನೀಡುವುದು) | |
| ಉ) | ಮೀಸಲಾತಿ ಸಂಬಂಧ ಇಲ್ಲಿಯವರೆಗೂ ಯಾವ ಯಾವ ಆಯೋಗದ ವರದಿಗಳನ್ನು ಸ್ವೀಕರಿಸಲಾಗಿದೆ? | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಪಟ್ಟಂತೆ, ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಕುರಿತು ನಿವೃತ್ತ ನ್ಯಾಯಾಧೀಶರಾದ ಶ್ರೀ. ನಾಗಮೋಹನ ದಾಸ್ ರವರ ಆಯೋಗದ ವರದಿಯನ್ವಯ ಅನುಷ್ಠಾನಗೊಳಿಸಲಾಗಿದೆ.<br><br>ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಆಯೋಗಗಳ ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ. |

**No: SWD/103/SLP/2024**

(**ಡಾ||ಹೆಚ್.ಸಿ.ಮಹದೇವಪ್ಪ**)
ಸಮಾಜ ಕಲ್ಯಾಣ ಸಚಿವರು.

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 942 ಕ್ಕೆ ಅನುಬಂಧ-1
## ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಮೀಸಲಾತಿ ವಿವರ

1) ಸರ್ಕಾರದ ಆದೇಶ ಸಂಖ್ಯೆ: DPAR 1 SBC ದಿನಾಂಕ: 04-03-1977ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Other backward classes | Percentage |
|---|---|---|
| 01 | Backward communities | 20% |
| 02 | Backward Caste | 10% |
| 03 | Backward Tribe | 5% |
| 04 | Special Group | 5% |
| | **Total** | **38%** |

2) ಸರ್ಕಾರದ ಆದೇಶ ಸಂಖ್ಯೆ: SWL 123 BCA 79 ದಿನಾಂಕ: 01-05-1979 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Other backward classes | Percentage |
|---|---|---|
| 01 | Backward communities | 18% |
| 02 | Backward Caste | 10% |
| 03 | Backward Tribe | 5% |
| | **Total** | **33** |

3) ಸರ್ಕಾರದ ಆದೇಶ ಸಂಖ್ಯೆ: SWL 66 BCA 86 ದಿನಾಂಕ: 13-10-1986 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Backward classes | Percentage |
|---|---|---|
| 01 | Group-A | 5% |
| 02 | Group-B | 13% |
| 03 | Group-C | 16% |
| 04 | Group-D | 11% |
| 05 | Group-E (Backward Special group) | 5% |
| | **Total** | **50%** |

4) ಸರ್ಕಾರದ ಆದೇಶ ಸಂಖ್ಯೆ: SWL 150 BCA 94 ದಿನಾಂಕ: 17-09-1994 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| Sl No | Category | Percentage |
|---|---|---|
| 01 | Category-I | 4% |
| 02 | Category-II((a) | 15% |
| 03 | Category –II(b) | 4% |
| 04 | Category –III(a) | 4% |
| 05 | Category-III(b) | 5% |
| | **Total** | **32%** |

5) ಸರ್ಕಾರದ ಆದೇಶ ಸಂಖ್ಯೆ: ಸಕಇ 251 ಬಿಸಿಎ 94 ದಿನಾಂಕ: 31-01-1995 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| **Sl No** | **Category** | **Percentage** |
|---|---|---|
| 01 | Category-I | 4% |
| 02 | Category-II((a) | 15% |
| 03 | Category –II(b) | 4% |
| 04 | Category –III(a) | 4% |
| 05 | Category-III(b) | 5% |
| | **Total** | **32%** |

6) ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ ವಿವರ

| **Sl No** | **Category** | **Percentage** |
|---|---|---|
| 01 | Category-I | 4% |
| 02 | Category-II((a) | 15% |
| 03 | Category –II(b) | 4% |
| 04 | Category –III(a) | 4% |
| 05 | Category-III(b) | 5% |
| | **Total** | **32%** |

****

ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022ನ್ನು ಹೊರಡಿಸಲಾಗಿರುತ್ತದೆ. ಮೇಲೆ (4)ರಲ್ಲಿ ಓದಲಾದ ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ. ಸಕಇ 84 ಎಸ್‌ಟಿಪಿ 2021 ರಲ್ಲಿ, ಸದರಿ ಅಧ್ಯಾದೇಶದ 1ನೇ ಪ್ರಕರಣದ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧ್ಯಾದೇಶದಲ್ಲಿನ ಎಲ್ಲಾ ಉಪಬಂಧಗಳು ದಿನಾಂಕ: 01.11.2022 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಲಾಗಿರುತ್ತದೆ.

3. ಸದರಿ ಅಧ್ಯಾದೇಶ, 2022ರ 4ನೇ ಪ್ರಕರಣದಲ್ಲಿ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡ 15 ರಿಂದ ಶೇಕಡ 17 ರಷ್ಟಕ್ಕೆ ಹಾಗೂ ಶೇಕಡ 3 ರಿಂದ ಶೇಕಡ 7ರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

4. ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ ನಿಗದಿಪಡಿಸಿರುವ ರೋಸ್ಟರನ್ನು ಮಾರ್ಪಡಿಸುವ ಸಂದರ್ಭ ಒದಗಿ ಬಂದಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022, ಬೆಂಗಳೂರು, ದಿನಾಂಕ: 28.12.2022</u>**

5. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 23.10.2022ರ ಅಧಿಸೂಚನೆಯಲ್ಲಿ ಹೊರಡಿಸಲಾದ ಅಧ್ಯಾದೇಶದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ನೇಮಕಾತಿಯಲ್ಲಿ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗುರುತಿಸಿ, ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿನ 100 ಬಿಂದುಗಳ ರೋಸ್ಟರನ್ನು ಈ ಆದೇಶದ ಅನುಬಂಧದಲ್ಲಿರುವ ಪರಿಷ್ಕೃತ ರೋಸ್ಟರಿಂದ ಪ್ರತಿಸ್ಥಾಪಿಸಲಾಗಿದೆ.

6. ಉಳಿದಂತೆ, ದಿನಾಂಕ: 20.06.1995ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 942 ಕ್ಕೆ
ಅನುಬಂಧ - 2.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4)ರ ಅನ್ವಯ ಮೀಸಲಾತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ:

(1) ದಿನಾಂಕ: 31.01.1995ರ ಸರ್ಕಾರದ ಆದೇಶ ಸಂಖ್ಯೆ: ಸಕಇ 251 ಬಿಸಿಎ 94.

(2) ದಿನಾಂಕ: 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95.

(3) ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2022.

(4) ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ: ಸಕಇ 84 ಎಸ್‌ಟಿಪಿ 2021.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 31.01.1995ರ ಸರ್ಕಾರದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮತ್ತು ಸರ್ಕಾರದ ಅಧೀನದಲ್ಲಿ ಬರುವ ಅಂಗ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಿಡಬಹುದಾದ ಮೀಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ನಿಗದಿಪಡಿಸಲಾಯಿತು. ಈ ಹಿನ್ನೆಲೆಯಲ್ಲಿ, ಭಾರತ ಸಂವಿಧಾನದ ಅನುಚ್ಛೇದ 16(4) ರ ಪ್ರಕಾರ ಸದರಿ ಮೀಸಲಾತಿಯನ್ನು ಜಾರಿಗೊಳಿಸಲು ಅಳವಡಿಸಬೇಕಾದ ರೋಸ್ಟರ್ ಬಗ್ಗೆ ಪರಿಶೀಲಿಸಿ ಮೇಲೆ (2) ರಲ್ಲಿ ಓದಲಾದ ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ 100 ಬಿಂದುಗಳ ಒಂದು ರೋಸ್ಟರನ್ನು ನಿಗದಿಪಡಿಸಲಾಯಿತು. ಸದರಿ ರೋಸ್ಟರಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ನಿಗದಿಪಡಿಸಿದ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗೊತ್ತುಪಡಿಸಲಾಗಿರುತ್ತದೆ.

2. ಮೇಲೆ (3)ರಲ್ಲಿ ಓದಲಾದ ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ

7. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಆದರೆ, ಯಾವುದೇ ವೃಂದದ ಹುದ್ದೆಗಳಿಗೆ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಆ ನೇಮಕಾತಿ ಪ್ರಕ್ರಿಯೆಯು ಈ ಆದೇಶದ ದಿನಾಂಕದಂದು ಬಾಕಿ ಇದ್ದಲ್ಲಿ, ಅಂತಹ ನೇರ ನೇಮಕಾತಿ ಪ್ರಕ್ರಿಯೆಯನ್ನು ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ ಗೊತ್ತುಪಡಿಸಿದ ರೋಸ್ಟರನ್ನು ಅನುಸರಿಸಿ ಪೂರ್ಣಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

28.12.2022
(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಇವರಿಗೆ:
ಸಂಕಲನಕಾರರು, ಇ-ರಾಜ್ಯಪತ್ರ

ಪ್ರತಿ:
1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ &ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
7. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ಬೆಂಗಳೂರು.
8. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. *ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
10. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
11. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.
12. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಎಲ್ಲಾ ಇಲಾಖಾ ಮುಖ್ಯಸ್ಥರು
14. ಎಲ್ಲಾ ಪ್ರಾದೇಶಿಕ ಆಯುಕ್ತರು/ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15. ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
16. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ) (ವಿಷಯ ಸಂಖ್ಯೆ:713/2022)
17. ಸರ್ಕಾರದ ಎಲ್ಲಾ ವಿಶೇಷ/ ಅಪರ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು
18. ಶಾಖಾ ರಕ್ಷಾ ಕಡತ/ ಅಧಿಕ ಪ್ರತಿಗಳು

(*ಮುಖಪತ್ರದೊಂದಿಗೆ)

# **ಅನುಬಂಧ**

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022 ದಿನಾಂಕ: 28.12.2022

| | | | | | | | |
|---|---|---|---|---|---|---|---|
| 01 | **ಪ.ಜಾ.** | 26 | ಸಾ.ಅ. | 51 | ಪ್ರವರ್ಗ-II(ಎ) | 76 | ಸಾ.ಅ. |
| 02 | ಸಾ.ಅ. | 27 | **ಪ.ಜಾ.** | 52 | ಸಾ.ಅ. | 77 | ಪ್ರವರ್ಗ-II(ಎ) |
| 03 | ಪ.ಪಂ | 28 | ಸಾ.ಅ. | 53 | **ಪ.ಜಾ.** | 78 | ಪ.ಪಂ. |
| 04 | ಸಾ.ಅ. | 29 | ಪ್ರವರ್ಗ-II(ಎ) | 54 | ಸಾ.ಅ. | 79 | ಪ್ರವರ್ಗ-I |
| 05 | ಪ್ರವರ್ಗ-I | 30 | ಸಾ.ಅ. | 55 | ಪ್ರವರ್ಗ-II(ಎ) | 80 | ಸಾ.ಅ. |
| 06 | ಸಾ.ಅ. | 31 | ಪ್ರವರ್ಗ-I | 56 | ಸಾ.ಅ. | 81 | **ಪ.ಜಾ.** |
| 07 | ಪ್ರವರ್ಗ-II(ಎ) | 32 | ಪ.ಪಂ | 57 | ಪ್ರವರ್ಗ-I | 82 | ಸಾ.ಅ. |
| 08 | ಸಾ.ಅ. | 33 | **ಪ.ಜಾ.** | 58 | ಸಾ.ಅ. | 83 | ಪ್ರವರ್ಗ-III(ಬಿ) |
| 09 | **ಪ.ಜಾ.** | 34 | ಸಾ.ಅ. | 59 | **ಪ.ಜಾ.** | 84 | ಸಾ.ಅ. |
| 10 | ಸಾ.ಅ. | 35 | ಪ್ರವರ್ಗ-II(ಬಿ) | 60 | ಸಾ.ಅ. | 85 | ಪ್ರವರ್ಗ-II(ಎ) |
| 11 | ಪ್ರವರ್ಗ-II(ಬಿ) | 36 | ಸಾ.ಅ. | 61 | ಪ್ರವರ್ಗ-II(ಬಿ) | 86 | ಸಾ.ಅ. |
| 12 | ಸಾ.ಅ. | 37 | ಪ್ರವರ್ಗ-II(ಎ) | 62 | ಪ.ಪಂ. | 87 | ಪ್ರವರ್ಗ-II(ಬಿ) |
| 13 | ಪ್ರವರ್ಗ-II(ಎ) | 38 | ಸಾ.ಅ. | 63 | ಪ್ರವರ್ಗ-II(ಎ) | 88 | ಸಾ.ಅ. |
| 14 | ಸಾ.ಅ. | 39 | ಪ.ಪಂ | 64 | ಸಾ.ಅ. | 89 | **ಪ.ಜಾ.** |
| 15 | **ಪ.ಜಾ.** | 40 | ಸಾ.ಅ. | 65 | ಪ್ರವರ್ಗ-III(ಬಿ) | 90 | ಸಾ.ಅ. |
| 16 | ಸಾ.ಅ. | 41 | **ಪ.ಜಾ.** | 66 | ಸಾ.ಅ. | 91 | ಪ್ರವರ್ಗ-II(ಎ) |
| 17 | ಪ್ರವರ್ಗ-III(ಎ) | 42 | ಸಾ.ಅ. | 67 | **ಪ.ಜಾ.** | 92 | ಸಾ.ಅ. |
| 18 | ಪ.ಪಂ | 43 | ಪ್ರವರ್ಗ-III(ಬಿ) | 68 | ಸಾ.ಅ. | 93 | **ಪ.ಜಾ.** |
| 19 | ಪ್ರವರ್ಗ-III(ಬಿ) | 44 | ಸಾ.ಅ. | 69 | ಪ್ರವರ್ಗ-II(ಎ) | 94 | ಸಾ.ಅ. |
| 20 | ಸಾ.ಅ. | 45 | ಪ್ರವರ್ಗ-II(ಎ) | 70 | ಸಾ.ಅ. | 95 | ಪ್ರವರ್ಗ-III(ಎ) |
| 21 | ಪ್ರವರ್ಗ-II(ಎ) | 46 | **ಪ.ಜಾ.** | 71 | ಪ.ಪಂ | **96** | **ಪ.ಜಾ.** |
| 22 | ಸಾ.ಅ. | 47 | ಪ್ರವರ್ಗ-III(ಎ) | 72 | ಸಾ.ಅ. | 97 | ಪ್ರವರ್ಗ-II(ಎ) |
| 23 | **ಪ.ಜಾ.** | 48 | ಸಾ.ಅ. | 73 | ಪ್ರವರ್ಗ-III(ಎ) | 98 | ಸಾ.ಅ. |
| 24 | ಸಾ.ಅ. | 49 | **ಪ.ಜಾ.** | 74 | ಸಾ.ಅ. | 99 | ಪ್ರವರ್ಗ-III(ಬಿ) |
| 25 | ಪ್ರವರ್ಗ-II(ಎ) | 50 | ಸಾ.ಅ. | 75 | **ಪ.ಜಾ.** | 100 | ಸಾ.ಅ. |

## ಸ್ಪಷ್ಟೀಕರಣ

| | | ಶೇಕಡವಾರು ಮೀಸಲಾತಿ |
|---|---|---|
| I | ಪ್ರವರ್ಗ- I | 4 |
| II(ಎ) | ಪ್ರವರ್ಗ- II(ಎ) | 15 |
| II(ಬಿ) | ಪ್ರವರ್ಗ-II(ಬಿ) | 4 |
| III(ಎ) | ಪ್ರವರ್ಗ- III(ಎ) | 4 |
| III(ಬಿ) | ಪ್ರವರ್ಗ-III(ಬಿ) | 5 |
| ಪ.ಜಾ. | ಪರಿಶಿಷ್ಟ ಜಾತಿ | 17 |
| ಪ.ಪಂ. | ಪರಿಶಿಷ್ಟ ಪಂಗಡ | 7 |
| ಸಾ.ಅ. | ಸಾಮಾನ್ಯ ಅರ್ಹತೆ | 44 |
| | ಒಟ್ಟು | 100 |

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯ ಸಿವಿಲ್ ಸೇವೆಗಳಲ್ಲಿನ ನಿರ್ದಿಷ್ಟಪಡಿಸಿದ ಹಂತದವರೆಗಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4ಎ)ರನ್ವಯ ಮೀಸಲಾತಿ ಕಲ್ಪಿಸುವ ಬಗ್ಗೆ.

**ಓದಲಾಗಿದೆ:**

(1) ದಿನಾಂಕ: 27.04.1978ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್ ಬಿಸಿ 77.
(2) ದಿನಾಂಕ: 30.08.1979ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 22 ಎಸ್ ಬಿಸಿ 79.
(3) ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯ ಶಾಇ 29 ಶಾಸನ 2022.
(4) ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ: ಸಕಇ 84 ಎಸ್‌ಟಿಪಿ 2021.

**ಪ್ರಸ್ತಾವನೆ :**

ಮೇಲೆ (1) ರಲ್ಲಿ ಓದಲಾದ ದಿನಾಂಕ: 27.04.1978ರ ಸರ್ಕಾರದ ಆದೇಶದಲ್ಲಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮತ್ತು ಸರ್ಕಾರದ ಅಧೀನದಲ್ಲಿ ಬರುವ ಅಂಗಸಂಸ್ಥೆಗಳಲ್ಲಿನ ನಿರ್ದಿಷ್ಟಪಡಿಸಿದ ಹಂತದವರೆಗಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದವರಿಗೆ ಕ್ರಮವಾಗಿ ಶೇಕಡ 15ರಷ್ಟು ಮತ್ತು ಶೇಕಡ 3ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಈ ಮೀಸಲಾತಿಯು ಆಯಾಯ ಇಲಾಖೆಯಲ್ಲಿನ ಗ್ರೂಪ್-ಎ(ಕಿರಿಯ ಶ್ರೇಣಿ) ವೃಂದದವರೆಗಿನ (ಆ ವೃಂದವೂ ಒಳಗೊಂಡಂತೆ) ಎಲ್ಲಾ ವೃಂದಗಳಲ್ಲಿನ ಹುದ್ದೆಗಳಿಗೆ ಅನ್ವಯವಾಗುತ್ತದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ: 27.04.1978ರ ಆದೇಶದ ಅನುಬಂಧದಲ್ಲಿ 33 ಬಿಂದುಗಳ ಒಂದು ರೋಸ್ಟರ್ ನ್ನು ನಿಗದಿಪಡಿಸಲಾಗಿರುತ್ತದೆ. ಮೇಲೆ (2) ರಲ್ಲಿ ಓದಲಾದ ದಿನಾಂಕ: 30.08.1979ರ ಸರ್ಕಾರದ ಆದೇಶದಲ್ಲಿ, ದಿನಾಂಕ: 27.04.78ರ ಆದೇಶದಲ್ಲಿ ನಿಗದಿಪಡಿಸಲಾಗಿದ್ದ ರೋಸ್ಟರನ್ನು ಪರಿಷ್ಕರಿಸಿ, ಪರಿಷ್ಕರಿಸಿದ ರೋಸ್ಟರನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ರೋಸ್ಟರಿನಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗಾಗಿ ನಿಗದಿಪಡಿಸಿದ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಮುಂಬಡ್ತಿಯಿಂದ ಭರ್ತಿ ಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗೊತ್ತುಪಡಿಸಲಾಗಿರುತ್ತದೆ.

2. ಮೇಲೆ (3) ರಲ್ಲಿ ಓದಲಾದ ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022ನ್ನು ಹೊರಡಿಸಲಾಗಿರುತ್ತದೆ. ಮೇಲೆ (4) ರಲ್ಲಿ ಓದಲಾದ ದಿನಾಂಕ: 31.10.2022 ರ ಅಧಿಸೂಚನೆ ಸಂಖ್ಯೆ: ಸಕಇ 84 ಎಸ್ ಟಿ ಪಿ 2021ರಲ್ಲಿ, ಸದರಿ ಅಧ್ಯಾದೇಶದ 1ನೇ ಪ್ರಕರಣದ (2) ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧ್ಯಾದೇಶದಲ್ಲಿನ ಎಲ್ಲಾ ಉಪಬಂಧಗಳು ದಿನಾಂಕ: 01.11.2022 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಲಾಗಿರುತ್ತದೆ.

3. 2022ರ ಸದರಿ ಅಧ್ಯಾದೇಶದ 4ನೇ ಪ್ರಕರಣದಲ್ಲಿ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡ 15 ರಿಂದ ಶೇಕಡ 17ರಷ್ಟಕ್ಕೆ ಹಾಗೂ ಶೇಕಡ 3 ರಿಂದ ಶೇಕಡ 7ರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

4. ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ಮೇಲೆ (2)ರಲ್ಲಿ ಓದಲಾದ ದಿನಾಂಕ: 30.08.1979ರ ಸರ್ಕಾರದ ಆದೇಶದ ಅನುಬಂಧದಲ್ಲಿ ನಿಗದಿಪಡಿಸಿರುವ ರೋಸ್ಟರನ್ನು ಮಾರ್ಪಡಿಸುವ ಸಂದರ್ಭ ಒದಗಿ ಬಂದಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2022, ಬೆಂಗಳೂರು,</u>**
**<u>ದಿನಾಂಕ:28.12.2022</u>**

5. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಮೇಲೆ (3)ರಲ್ಲಿ ಓದಲಾದ ದಿನಾಂಕ: 23.10.2022ರ ಅಧಿಸೂಚನೆಯಲ್ಲಿ ಹೊರಡಿಸಲಾದ ಅಧ್ಯಾದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ನೇಮಕಾತಿಯಲ್ಲಿ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಮುಂಬಡ್ತಿಯ ಮುಖಾಂತರ ಭರ್ತಿ ಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗುರುತಿಸಿ, ಮೇಲಿನ (2) ರಲ್ಲಿ ಓದಲಾದ ದಿನಾಂಕ: 30.08.1979ರ ಸರ್ಕಾರದ

ಆದೇಶದ ಅನುಬಂಧದಲ್ಲಿನ 33 ಬಿಂದುಗಳ ರೋಸ್ಟರನ್ನು ಈ ಆದೇಶದ ಅನುಬಂಧದಲ್ಲಿರುವ ಪರಿಷ್ಕೃತ ರೋಸ್ಟರಿಂದ ಪ್ರತಿಸ್ಥಾಪಿಸಲಾಗಿದೆ.

6. ಉಳಿದಂತೆ, ಮೇಲೆ (1) ಮತ್ತು (2) ರಲ್ಲಿ ಓದಲಾದ ದಿನಾಂಕ: 27.04.1978 ಮತ್ತು ದಿನಾಂಕ: 30.08.1979ರ ಆದೇಶಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಈ ಸರ್ಕಾರಿ ಆದೇಶವನ್ನು ಹೊರಡಿಸಿದ ನಂತರ ಮೀಸಲಾತಿ ಅನ್ವಯವಾಗುವ ವೃಂದಗಳಿಗೆ ಮುಂಬಡ್ತಿ ನೀಡುವಾಗ ಈ ಆದೇಶಕ್ಕೆ ಲಗತ್ತಿಸಿರುವ ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭಿಸತಕ್ಕದ್ದು.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28-12-2022
(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1)

ಇವರಿಗೆ:
ಸಂಕಲನಕಾರರು, ಇ-ರಾಜ್ಯಪತ್ರ

ಪ್ರತಿ:
1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್ಎಸ್ಎ), (ಇ &ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು.
6. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
7. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ಬೆಂಗಳೂರು.
8. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. *ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
10.*ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

..4..

11.*ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.

12.*ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.

13. ಎಲ್ಲಾ ಇಲಾಖಾ ಮುಖ್ಯಸ್ಥರು

14.ಎಲ್ಲಾ ಪ್ರಾದೇಶಿಕ ಆಯುಕ್ತರು/ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್.

15. ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.

16. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ) (ವಿಷಯ ಸಂಖ್ಯೆ:713/2022)

17. ಸರ್ಕಾರದ ಎಲ್ಲಾ ವಿಶೇಷ/ ಅಪರ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು

18. ಶಾಖಾ ರಕ್ಷಾ ಕಡತ/ ಅಧಿಕ ಪ್ರತಿಗಳು

(*ಮುಖಪತ್ರದೊಂದಿಗೆ)

# ಅನುಬಂಧ

| | | | | | | | |
|---|---|---|---|---|---|---|---|
| 01 | **ಪ.ಜಾ.** | 26 | ಮೀಸಲು ರಹಿತ | 51 | ಮೀಸಲು ರಹಿತ | 76 | **ಪ.ಜಾ.** |
| 02 | ಪ.ಪಂ | 27 | **ಪ.ಜಾ.** | 52 | ಮೀಸಲು ರಹಿತ | 77 | ಮೀಸಲು ರಹಿತ |
| 03 | ಮೀಸಲು ರಹಿತ | 28 | ಮೀಸಲು ರಹಿತ | 53 | ಮೀಸಲು ರಹಿತ | 78 | ಮೀಸಲು ರಹಿತ |
| 04 | ಮೀಸಲು ರಹಿತ | 29 | ಮೀಸಲು ರಹಿತ | 54 | **ಪ.ಜಾ.** | 79 | ಮೀಸಲು ರಹಿತ |
| 05 | ಮೀಸಲು ರಹಿತ | 30 | ಮೀಸಲು ರಹಿತ | 55 | ಮೀಸಲು ರಹಿತ | 80 | **ಪ.ಜಾ.** |
| 06 | ಮೀಸಲು ರಹಿತ | 31 | ಮೀಸಲು ರಹಿತ | 56 | ಮೀಸಲು ರಹಿತ | 81 | ಮೀಸಲು ರಹಿತ |
| 07 | **ಪ.ಜಾ.** | 32 | ಮೀಸಲು ರಹಿತ | 57 | ಮೀಸಲು ರಹಿತ | 82 | ಮೀಸಲು ರಹಿತ |
| 08 | ಮೀಸಲು ರಹಿತ | 33 | ಮೀಸಲು ರಹಿತ | 58 | ಮೀಸಲು ರಹಿತ | 83 | **ಪ.ಪಂ** |
| 09 | ಮೀಸಲು ರಹಿತ | 34 | **ಪ.ಜಾ.** | 59 | ಮೀಸಲು ರಹಿತ | 84 | ಮೀಸಲು ರಹಿತ |
| 10 | ಮೀಸಲು ರಹಿತ | 35 | **ಪ.ಪಂ.** | 60 | **ಪ.ಜಾ.** | 85 | ಮೀಸಲು ರಹಿತ |
| 11 | ಮೀಸಲು ರಹಿತ | 36 | ಮೀಸಲು ರಹಿತ | 61 | ಮೀಸಲು ರಹಿತ | 86 | ಮೀಸಲು ರಹಿತ |
| 12 | ಮೀಸಲು ರಹಿತ | 37 | ಮೀಸಲು ರಹಿತ | 62 | ಮೀಸಲು ರಹಿತ | 87 | **ಪ.ಜಾ.** |
| 13 | ಮೀಸಲು ರಹಿತ | 38 | ಮೀಸಲು ರಹಿತ | 63 | ಮೀಸಲು ರಹಿತ | 88 | ಮೀಸಲು ರಹಿತ |
| 14 | **ಪ.ಜಾ.** | 39 | ಮೀಸಲು ರಹಿತ | 64 | ಮೀಸಲು ರಹಿತ | 89 | ಮೀಸಲು ರಹಿತ |
| 15 | ಮೀಸಲು ರಹಿತ | 40 | **ಪ.ಜಾ.** | 65 | ಮೀಸಲು ರಹಿತ | 90 | ಮೀಸಲು ರಹಿತ |
| 16 | ಮೀಸಲು ರಹಿತ | 41 | ಮೀಸಲು ರಹಿತ | 66 | ಮೀಸಲು ರಹಿತ | 91 | ಮೀಸಲು ರಹಿತ |
| 17 | **ಪ.ಪಂ.** | 42 | ಮೀಸಲು ರಹಿತ | 67 | **ಪ.ಜಾ.** | 92 | ಮೀಸಲು ರಹಿತ |
| 18 | ಮೀಸಲು ರಹಿತ | 43 | ಮೀಸಲು ರಹಿತ | 68 | ಪ.ಪಂ. | 93 | **ಪ.ಜಾ.** |
| 19 | ಮೀಸಲು ರಹಿತ | 44 | ಮೀಸಲು ರಹಿತ | 69 | ಮೀಸಲು ರಹಿತ | 94 | ಮೀಸಲು ರಹಿತ |
| 20 | ಮೀಸಲು ರಹಿತ | 45 | ಮೀಸಲು ರಹಿತ | 70 | ಮೀಸಲು ರಹಿತ | 95 | ಮೀಸಲು ರಹಿತ |
| 21 | **ಪ.ಜಾ.** | 46 | ಮೀಸಲು ರಹಿತ | 71 | ಮೀಸಲು ರಹಿತ | 96 | ಮೀಸಲು ರಹಿತ |
| 22 | ಮೀಸಲು ರಹಿತ | 47 | **ಪ.ಜಾ.** | 72 | ಮೀಸಲು ರಹಿತ | 97 | ಮೀಸಲು ರಹಿತ |
| 23 | ಮೀಸಲು ರಹಿತ | 48 | ಮೀಸಲು ರಹಿತ | 73 | **ಪ.ಜಾ.** | 98 | ಪ.ಪಂ. |
| 24 | ಮೀಸಲು ರಹಿತ | 49 | **ಪ.ಪಂ.** | 74 | ಮೀಸಲು ರಹಿತ | 99 | ಮೀಸಲು ರಹಿತ |
| 25 | **ಪ.ಜಾ.** | 50 | ಮೀಸಲು ರಹಿತ | 75 | ಮೀಸಲು ರಹಿತ | 100 | ಮೀಸಲು ರಹಿತ |

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ: 942- ಗೆ ಅನುಬಂಧ - 3

## 1918 ರಿಂದ 2019 ರವರೆಗೆ ಕಾರ್ಯನಿರ್ವಹಿಸಿದ ಹಿಂದುಳಿದ ವರ್ಗಗಳ ಆಯೋಗಗಳ ವಿವರ

| ಕ್ರ. ಸಂ | ಆಯೋಗದ ಹೆಸರು | ಆಯೋಗ ರಚಿಸಿದ ದಿನಾಂಕ | ಆಯೋಗದ ಅವಧಿ | ಷರಾ |
|---|---|---|---|---|
| 1 | ಲೆಸ್ಲಿ ಸಿ. ಮಿಲ್ಲರ್ ಆಯೋಗ ಮೈಸೂರು ಮಹಾರಾಜರಿಂದ ರಚಿಸಲಾಗಿದೆ. | 23. 08. 1918 | 1918 | ವರದಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. |
| 2 | ಡಾ. ಆರ್. ನಾಗನಗೌಡ ಅಧ್ಯಕ್ಷರು, ಮೈಸೂರು ಬ್ಯಾಕ್ ವರ್ಡ್ ಕ್ಲಾಸ್ ಕಮಿಟಿ | 1960 | – | ವರದಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. |
| 3 | ಶ್ರೀ ಎಲ್. ಜಿ. ಹಾವನೂರು ಅಧ್ಯಕ್ಷರು, 1ನೇ ಹಿಂದುಳಿದ ವರ್ಗಗಳ ಆಯೋಗ | 1972 | 1972-1975 | Vol-1 (Part1 & 11), vol-1, vol-111 &1V- 1975 ರಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ<br>ವರದಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. |
| 4 | ಶ್ರೀ ಟಿ. ವೆಂಕಟಸ್ವಾಮಿ ಅಧ್ಯಕ್ಷರು, 2ನೇ ಹಿಂದುಳಿದ ವರ್ಗಗಳ ಆಯೋಗ | 1983 | 1983-1986 | Vol-1 Vol-11, & vol-111 1986 ರಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ. |
| 5 | ಶ್ರೀ ಓ. ಚಿನ್ನಪ್ಪ ರೆಡ್ಡಿ ಅಧ್ಯಕ್ಷರು, 3ನೇ ಹಿಂದುಳಿದ ವರ್ಗಗಳ ಆಯೋಗ | 1988 | 1988-1990 | Vol-1 Vol-11 1990 ರಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ.<br>ವರದಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. |
| 6 | ಶ್ರೀ ಕುದ್ಲೂರು ನಾರಾಯಣ ರೈ ಅಧ್ಯಕ್ಷರು, ಶಾಶ್ವತ ಹಿಂದುಳಿದ ವರ್ಗಗಳ ಆಯೋಗ | 1993 | 1994-1995 | ವರದಿಯನ್ನು ಸಲ್ಲಿಸಿರುವುದಿಲ್ಲ. |
| 7 | ಪ್ರೊ\|\| ರವಿವರ್ಮ ಕುಮಾರ್ ಅಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 1997 | 1997-2000 | ವರದಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. |
| 8 | ಶ್ರೀ ಮುನಿರಾಜು ಅಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 2001 | 2001-2003 | ವರದಿಯನ್ನು ಸಲ್ಲಿಸಿರುವುದಿಲ್ಲ. |

| | | | | |
|---|---|---|---|---|
| 9 | ಶ್ರೀ ಸಿದ್ಧಗಂಗಯ್ಯ<br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 2003 | 2003-2006 | ಭಾಗ-1ರಲ್ಲಿ 34 ಸಲಹೆ/ ಶಿಫಾರಸ್ಸುಗಳನ್ನು ಭಾಗ-2 ರಲ್ಲಿ 06 ವಿಶೇಷ ವರದಿಗಳನ್ನೊಳಗೊಂಡ ವರದಿಗಳನ್ನು ದಿನಾಂಕ: 07.03.2005 ರಂದು ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆ ಯಲ್ಲಿರುತ್ತದೆ. |
| 10 | ಡಾ. ಸಿ. ಎಸ್. ದ್ವಾರಕನಾಥ್<br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 2007 | 2007-2010 | ಭಾಗ-1ರ ವಿಶೇಷ ವರದಿಯ 33 ಸಲಹೆಗಳು ಹಾಗೂ ಭಾಗ-2 ರಲ್ಲಿ 26 ಸಲಹೆಗಳನ್ನೊಳಗೊಂಡ ವರದಿಯನ್ನು 2010 ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆ ಯಲ್ಲಿರುತ್ತದೆ. |
| 11 | ಶ್ರೀ ಎನ್. ಶಂಕ್ರಪ್ಪ<br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 2011 | 2011-2013 | ಪ್ರಥಮ ವರದಿಯಲ್ಲಿ 08 ಸಲಹೆ ಗಳನ್ನೊಳಗೊಂಡ ವರದಿಯನ್ನು 2012 ರಲ್ಲಿ ದ್ವಿತೀಯ ವರದಿಯ 06 ಸಲಹೆಗಳನ್ನೊಳ ಗೊಂಡ ವರದಿಯನ್ನು 2013 ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆ ಯಲ್ಲಿರುತ್ತದೆ. |
| 12 | ಶ್ರೀ ಹೆಚ್. ಕಾಂತರಾಜ<br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 2014 | 2014-2019 | 2015 ರಲ್ಲಿ 14 (12+2) ವಿಶೇಷ ವರದಿಗಳು ಹಾಗೂ 120 ಬಹಿರಂಗ ವಿಚಾರಣೆಯ ಸಲಹೆಗಳನ್ನು ಕ್ರಮವಾಗಿ ದಿನಾಂಕ:28.08.2015, 24.03.2018 ಹಾಗೂ 09.07.2019 ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆ ಯಲ್ಲಿರುತ್ತದೆ.<br><br>2015ರ ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯನ್ನು ಸಿದ್ಧಪಡಿಸಿದ್ದು, ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. |
| 13 | ಶ್ರೀ ಕೆ. ಜಯಪ್ರಕಾಶ ಹೆಗ್ಡೆ ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ | 2020 | ಇಲ್ಲಿಯವರೆಗೆ | ಪ್ರಥಮ ವರದಿ, ದ್ವಿತೀಯ ವರದಿ ಮತ್ತು ವಿಶೇಷ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆ ಯಲ್ಲಿರುತ್ತದೆ. |